


# ಇಂಟೀರಿಯರ್ ಗಾರ್ಡನ್

ಕಾಡಿನ ಪ್ರಾಣಿ–ಪಕ್ಷಿಗಳನ್ನು ನಾಡಿಗೆ ತಂದು, ಪಳಗಿಸಿ, ಸಾಕಿ–ಬೆಳೆಸಿ, ಅವುಗಳೊಂದಿಗೆ ಭಾವನಾತ್ಮಕ ಬಂಧ ಬೆಳೆಸುವುದು ಮಾನವನಿಗೆ ಹೊಸದಲ್ಲ. ಬಹುಶಃ ಇಂಥದ್ದೇ ಹಾದಿಯಲ್ಲೆಲ್ಲೋ ಶುರುವಾದದ್ದು ಒಳಾಂಗಣ ಸಸ್ಯಗಳನ್ನು ಪಾಲಿಸಿ ಪೋಷಿಸುವ 'ಇಂಡೋರ್ ಗಾರ್ಡನಿಂಗ್'ನ ಹವ್ಯಾಸ.

ಇತಿಹಾಸದಲ್ಲಿ ಈ ಹವ್ಯಾಸದ ಆರಂಭವನ್ನು ಕರಾರುವಕ್ಕಾಗಿ ಗುರುತಿಸಲಾಗದಿದ್ದರೂ ಕೆಲವೊಂದು ಘಟನೆಗಳನ್ನು ಉಲ್ಲೇಖಿಸಲಾಗುತ್ತದೆ. ಸುಂದರ ಕೆತ್ತನೆಗಳ ಟೆರಾಕೋಟಾ, ಅಮೃತಶಿಲೆ–ಪಿಂಗಾಣಿಯ ಹೂಕುಂಡಗಳಲ್ಲಿ ಹಣ್ಣಿನ ಗಿಡಗಳನ್ನು, ಅಲಂಕಾರಿಕ ಗಿಡಗಳನ್ನು ಬೆಳೆಸಿ ಅಂಗಳದಲ್ಲಿ ಒಪ್ಪವಾಗಿ ಜೋಡಿಸುವ ಅಭ್ಯಾಸ ಪ್ರಾಚೀನ ರೋಮನ್, ಈಜಿಪ್ಟ್, ಚೀನಾಗಳಲ್ಲಿ ರೂಢಿಯಲ್ಲಿತ್ತು. ಜಪಾನಿಯನ್ನರು, ಚೀನೀಯರಲ್ಲಿ ಪ್ರಕೃತಿಯನ್ನು ಅನುಕರಿಸಿ ರೂಪಿಸುವ ಬೋನ್ಸಾಯ್, ಪೆನ್ಸಾಯ್ ಕಲೆಗಳು ಇಂದಿಗೂ ಜಗತ್ಪ್ರಸಿದ್ಧ. ನೆಬುಕನೇಜರ್ ಎಂಬ ರಾಜನೊಬ್ಬ ತನ್ನ ಪ್ರೀತಿಯ ಮಡದಿಗಾಗಿ ಬ್ಯಾಬಿಲೋನ್‌ನ (ಇಂದಿನ ಇರಾಕ್‌ನ) ಅರಮನೆಯಲ್ಲಿ ಖರ್ಜೂರ, ದೇವದಾರು, ಹುಲ್ಲುಗಾವಲುಳ್ಳ ತೇಲುವ ಉದ್ಯಾನವನ್ನು ನಿರ್ಮಿಸಿದ್ದನಂತೆ.



## ಬೆಳೆದಿದ್ದು ಹೀಗೆ...

ಈ ಮೈಲಿಗಲ್ಲುಗಳಲ್ಲಿ ಮಹತ್ತರವಾದದ್ದು ಹೊಸ ದೇಶ–ಭೂಭಾಗಗಳ ಅನ್ವೇಷಣೆ, ಹೊಸ ಸಸ್ಯ ಸಂಪತ್ತಿನ ಪರಿಚಯ, ತಳಿಗಳ ಸಂಕರ ಮತ್ತು ಉದ್ಯಾನವನಗಳಲ್ಲಿ ತಳಿಗಳ ಪ್ರದರ್ಶನ. ಅನ್ವೇಷಕರು ತಮ್ಮ ಸಮುದ್ರ ಪ್ರಯಾಣಗಳಿಗೆ ಧನಸಹಾಯ ಮಾಡುತ್ತಿದ್ದ ಮೊನೆಸ್ಟರಿಗಳಿಗೆ ಗಿಡಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರಂತೆ. ಹೀಗೆಯೇ ಕೊಲಂಬಸ್ ಉತ್ತರ ಅಮೆರಿಕದ ಬಹಳಷ್ಟು ಗಿಡಗಳನ್ನು ಯೂರೋಪ್‌ಗೆ ಪರಿಚಯಿಸಿದ್ದು. ತಂಪು ಕೊರೆಯುವ ಚಳಿಯ ಸಮಯದಲ್ಲಿ ಉಷ್ಣವಲಯದ ಇಂತಹ ಗಿಡಗಳನ್ನು ಮನೆಯಲ್ಲಿ ಬೆಳೆಸುವುದು ಕಷ್ಟವಾದಾಗ ಕಂಡುಹಿಡಿದ 'ಗಾಜಿನ ಮನೆ' ಹೊಸ ಅಲೆಯೊಂದನ್ನು ಸೃಷ್ಟಿಸಿತು. ನಂತರದ ಕೈಗಾರಿಕಾ ಕ್ರಾಂತಿ, ರಾಣಿ ವಿಕ್ಟೋರಿಯಾಳ ಕಾಲದಲ್ಲಿ ಐಷಾರಾಮಿ ಇಂಗ್ಲಿಷರಲ್ಲದೆ ಸಾಮಾನ್ಯ ಜನರು ಕೂಡಾ ಒಳಾಂಗಣ ಗಿಡಗಳ ವಿನ್ಯಾಸವನ್ನು ವ್ಯಾಪಕವಾಗಿಸಿದರು. ಮನೆಯೊಳಗಡೆ ವಿವಿಧ ರೀತಿಯ ಫರ್ನ್ (ಜರಿ ಗಿಡಗಳು), ಪಾಮ್‌ಗಳನ್ನು ಬೆಳೆಸತೊಡಗಿದರು.

ನರ್ಸರಿಗಳು, ಗಿಡಗಳ ಮಾರಾಟ, ಕೊಡು–ಕೊಳ್ಳುವಿಕೆ ನಿಧಾನಕ್ಕೆ ಪ್ರಾರಂಭವಾದವು. ತೋಟಗಾರರ ಸಂಘ, ಸಸ್ಯಪ್ರಿಯರ ದೊಡ್ಡ ಸಮಾಜವೇ